ಓ.ಎಸ್.ನಂ.14/2011
ಪಿ.ಡಬ್ಲ್ಯೂ-01

**ಸಾಕ್ಷಿಯನ್ನು ದಿಃ 20.03.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. B.K.V.ವಕೀಲರಿಂದ.**

ಎಲ್ಲಾ ದಾವಾ ಸ್ವತ್ತುಗಳ ಮಾರುಕಟ್ಟೆ ಬೆಲೆ ಎಷ್ಟು ಎಂದು ನನಗೆ ಗೊತ್ತಿಲ್ಲ. ದಾವೆ ದಾಖಲು ಮಾಡುವ ಸಮಯದಲ್ಲಿ ದಾವಾ ಎ ಶೆಡ್ಯೂಲ್ ಸ್ವತ್ತಿನ ಬೆಲೆ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ದಿಃ 10.06.81 ರಲ್ಲಿ ಎ ಶೆಡ್ಯೂಲ್ ಸ್ವತ್ತಿನ ಬೆಲೆ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಕ್ರಯ ಪತ್ರವನ್ನು ಯಾರು ಯಾರು ಮಾಡಿಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮೈನರ್ ಮಕ್ಕಳ ಪರವಾಗಿ ಕ್ರಯ ಪತ್ರ ಮಾಡಿಕೊಟ್ಟಿರುವುದಾಗಿ ದಾವೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ನಮ್ಮ ಎಲ್ಲರಿಗೂ ಕರ್ತ ಆಗಿರುತ್ತಾರೆಂದರೆ ಸರಿ. ಸದರಿ ಕ್ರಯ ಪತ್ರ 6 ಸಾವಿರ ರೂ. ಗಳಿಗೆ ಆಗಿರುತ್ತದೆ.

ರಂಗಯ್ಯ 1 ಮತ್ತು 3 ಪ್ರತಿವಾದಿ ಗಳ ತಂದೆ ಆಗಿರುತ್ತಾರೆಂದರೆ ಸರಿ. ಕ್ರಯ ಪತ್ರದ ಆಧಾರದ ಮೇರೆಗೆ ರಂಗಯ್ಯ ಅವರ ಹೆಸರಿಗೆ ಖಾತೆ ಬದಲಾಣಗೆ ಆಗಿರುತ್ತದೆ ಎಂದರೆ ಸರಿಯಲ್ಲ. ರಂಗಯ್ಯ ಅವರ ಮರಣಾನಂತರ 1 -3 ಅವರ ಪ್ರತಿವಾದಿಗಳ ಹೆಸರಿಗೆ ಖಾತೆ ಪಹಣಿ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ದಾವೆ ಚಾಲ್ತಿಯಲ್ಲಿದ್ದಾಗ ಆಗಿರುತ್ತದೆ ಎಂದು ಹೇಳುತ್ತಾರೆ. ರಂಗಯ್ಯ ಅವರು ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ.

ದಾವಾ ಎ ಶೆಡ್ಯೂಲ್ ಸ್ವತ್ತನ್ನು 3 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನನ್ನ ತಂದೆ ತಾತ ಮಾಡುತ್ತಿದ್ದರು ಎಂದು ಹೇಳುತ್ತಾರೆ. ರಂಗಯ್ಯ ಬಿಲ್ ಹಚ್ಚೆಗೌಡ ಎಂದರೆ ಪ್ರತಿವಾದಿ 1 -3 ಅವರ ತಂದೆ ಎಂದರೆ ಸರಿ. ನಾನು ಎಸ್.ಎಸ್.ಎಲ್. ಸಿ ಓದಿದ್ದು ಫ್ಯಾಕ್ಟರಿಯಲ್ಲಿ 15 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ.

ಸಾಕ್ಷಿಗೆ 2 ಪಹಣಿ ಪತ್ರಿಕೆಗಳನ್ನು ತೋರಿಸಿ ಅದರಲ್ಲಿ ರಂಗಯ್ಯ ಬಿನ್ ಹುಚ್ಚೇಗೌಡ ಅವರ ಹೆಸರು ಇರುತ್ತದೆ ಎಂದರೆ ಸಾಕ್ಷಿ ಉದ್ದೇಶ ಪೂರ್ವಕವಾಗಿ ಸೃಷ್ಟಿ ಮಾಡಿರುತ್ತಾರೆಂದು ಹೇಳುತ್ತಾರೆ. ದಾವೆ ದಾಖಲು ಮಾಡುವ ಸಮಯದಲ್ಲಿ 1940-2010/11 ರವೆಗಿನ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ನಿಶಾಣೆ ಯಲ್ಲಿರುವ ದಾಖಲೆಗಳನ್ನು ತೋರಿಸಿ ಕೇಳಲಾಗಿ ದಾಖಲೆಗಳಲ್ಲಿ ಇಲ್ಲವೆಂದು ಹೇಳುತ್ತಾರೆ.

ಎ ಶೆಡ್ಯೂಲ್ ಪಹಣಿ ಪತ್ರಿಕೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಹಾಜರು ಪಡಿಸುತ್ತೇನೆ. ನನ್ನ ತಂದೆ ಹೆಸರು ಬೆಟ್ಟಪ್ಪ ಅವರು 2007 ರಲ್ಲಿ ಮರಣ ಹೊಂದಿರುತ್ತಾರೆ. ದಾವೆಯಲ್ಲಿ ಪ್ರತಿವಾದಿ 1-3 ದಾವಾ ಸ್ವತ್ತನ್ನು ವಾರದ ಆಧಾರದ ಮೇರೆಗೆ ಮಾಡುವುದಾಗಿ ಬರೆಸಿದ್ದು 2010 ರಲ್ಲಿ ಪಂಚಾಯಿತಿ ಮಾಡಿ ದಾವಾ ಸ್ವತ್ತನ್ನು ಬಿಟ್ಟು ಕೊಡುವಂತೆ ಹೇಳಿರುತ್ತೆನೆ ಎಂದರೆ ಸರಿ. ದಾವಾ ಸ್ವತ್ತು ವಾರದ ಆಧಾರದ ಮೇಲೆ ಮಾಡುವ ಬಗ್ಗೆ ರಶೀದಿ ಮತ್ತು ಕರಾರು ಪತ್ರ ಹಾಜರು ಪಡಿಸಿರುವುದಿಲ್ಲ. ಪ್ರತಿವಾದಿ 1-3 10-12 ವರ್ಷಗಳಿಂದ ದಾವಾ ಸ್ವತ್ತುಗಳನ್ನು ವಾರದ ಆಧಾರವ ಮೇಲೆ ಮಾಡುತ್ತಿದ್ದ್ದರ. ಪ್ರತಿವಾದಿ 1-3 ಅವರು ದಾವಾ ಎ ಶೆಡ್ಯೂಲ್ ಸ್ವತ್ತಿನ ಮಾಲಿಕರಾಗಿ ಅನುಭಾವಿಸುತ್ತಿದ್ದು ವಾರದ ಮೆರೆಗೆ ಅನುಭವಿಸುತ್ತಿಲ್ಲವೆಂದರೆ ಸರಿಯಲ್ಲ.

ನನ್ನ ತಾತ ಗೌಡಯ್ಯ 1995-96 ರಲ್ಲಿ ಮರಣ ಹೊಂದಿರುತ್ತಾರೆ. ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ ಸಾಕ್ಷಿಗೆ ನಿಶಾನೆ ಆದ ದಾಖಲೆಗಳನ್ನು ತೋರಿಸಿ ಕೇಳಿದಾಗ ಮರಣ ಪ್ರಮಾಣ ಪತ್ರವನ್ನು ವಕೀಲರಿಗೆ ನೀಡಿರುತ್ತೇನೆಂದು ಹೇಳುತ್ತಾರೆ ನಿ.ಪಿ 3-6 ಸೃಷ್ಟಿ ಮಾಡಿದ ದಾಖಲೆಗಳು ಎಂದರೆ ಸರಿಯಲ್ಲ. ದಿಃ 24.02.1969 ರ ಮೊದಲು ನನ್ನ ತಾತ ಮರಣ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ನನ್ನ ತಂದೆ ಗೌಡಯ್ಯ ಅವರಿಗೆ ಒಬ್ಬನೇ ಮಗ ಎಂದರೆ ಸರಿ. ನನ್ನ ತಾತ ಮರಣಾನಂತರ ದಾವಾ ಸ್ವತ್ತುಗಳು ಮಾಲಿಕತ್ವ ನನ್ನ ತಂದೆಗೆ ಬಂದಿರುತ್ತದೆ. ನನ್ನ ತಾತನ ಮರಣಾನಂತರ ನನ್ನ ತಂದೆ 1-3 ಪ್ರತಿವಾದಿಗಳಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಎ ಶೆಡ್ಯೂಕಲ್ ಸ್ವತ್ತುನ್ನು ಮಾರಾಟ ಮಾಡಿರುತ್ತಾರೆಂದರೆ

ಸರಿಯಲ್ಲ. ಆದ ಕಾರಣ ನನ್ನ ತಾತನ ಮರಣದ ಪ್ರಮಾಣ ಪತ್ರವನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ.

ನಿ.ಪಿ 3-6 ರ ದಾಖಲೆಗಳಲ್ಲಿ ಇರುವಂತಹ ಸಹಿ ಸಹ ಒತ್ತಾಯದ್ದು ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ 7 ದಾಖಲೆ ಆಗುವ ಮೊದಲೇ ನನ್ನ ತಾತ ಮರಣ ಹೊಂದಿರುತ್ತಾರೆಂದರೆ ಸರಿಯಿಲ್ಲ. ನಿ.ಪಿ 1 ಅನ್ನು ವಕೀಲರಿಗೆ ನಾನೇ ಮಾಹಿತಿ ನೀಡಿದ್ದು ತಯಾರು ಮಾಡಲಾಗಿದೆ.

ಬ್ಯಾಟೇಗೌಡ ಮತ್ತು ರಂಗಮ್ಮಾ ಅವರಿಗೆ 3 ಜನ ಮಕ್ಕಳು. ಗೌಡಯ್ಯ,ಹುಚ್ಚೀಯ್ಯ ಮತ್ತು ಗಂರಯ್ಯ ಆಗಿರುತ್ತಾರೆ. ನಿ.ಪಿ 1 ರಲ್ಲಿ ಬ್ಯಾಟೇಗೌಡ ಮತ್ತು ರಂಗಮ್ಮಾ ಅವರಿಗೆ 3 ಜನ ಮಕ್ಕಳುಇದ್ದ ಬಗ್ಗೆ ಬರೆಸಿಲ್ಲವೆಂದರೆ ಸರಿ. ಗೌಡಯ್ಯ ನಿಂಗಮ್ಮಾ ಅವರಿಗೆ ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾಗಿದ್ದು ಈ ಬಗ್ಗೆ ದಾಖಲೆ ನೀಡಿಲ್ಲ. ಬ್ಯಾಟೇಗೌಡನ 3 ಜನ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ.

ವಂಶವೃಕ್ಷದಲ್ಲಿ ಮತ್ತು ದಾವೆಯಲ್ಲಿ ನನ್ನ ತಾತ ಯಾವಾಗ ಮರಣ ಹೊಂದಿರುತ್ತಾರೆಂದು ಬರೆಸಿರುವುದಿಲ್ಲವೆಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.